**ದಿಃ07.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:**-ಪ್ರತಿವಾದಿ ಪರ ಶ್ರೀ.ಪಿ.ವೈ.ಹೆಚ್., ವಕೀಲರಿಂದಃ-

ನಾನು 2 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು, ವಾದಿ ಮತ್ತು ಕೆಂಚನಗೌಡ(ಪಿಡಬ್ಲೂ-2) ವಿಶ್ವಾಸಸದಿಂದ ಇದ್ದು ಕಷ್ಟ ಸುಖಕ್ಕೆ ಆಗುತ್ತೇವೆ ಎಂದರೆ ಸರಿ. ಈಗ ನನಗೆ ತೋರಿಸಿರುವ ಒಂದು ಪೋಟೋನಲ್ಲಿ ಕಾಣುವ ಒಂದು ಮನೆ ವಾದಿಯ ತಂದೆ-ತಾಯಿಯವರ

ಮನೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಸದರಿ ಪೋಟೋವನ್ನು ನಿ.ಡಿ.7 ಎಂದು ಗುರುತಿಸಲಾಯಿತು. ಸದರಿ ನಿ.ಡಿ.7 ರಲ್ಲಿ ಕಾಣುವ ಮನೆಯಲ್ಲಿ ವಾದಿಯರು ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಮನೆಯೂ ರಸ್ತೆಯ ಪೂರ್ವಕ್ಕೆ ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಪ್ರತಿವಾದಿಗಳ ಮನೆಗಳು ಇರುತ್ತವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಖುದ್ದಾಗಿ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಇರುವ ವಿಚಾರಗಳು ನನಗೆ ತಿಳಿದಿರುತ್ತವೆ. ನಾನು, ವಾದಿ ಮತ್ತು ಪಿಡಬ್ಲೂ-2 ವಿಶ್ವಾಸದಲ್ಲಿ ಇದ್ದ ಕಾರಣ ನಾನು ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಎಷ್ಟು ಆಸ್ತಿಗಳು ಇವೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈ ಕೇಸಿನ ವಿಚಾರದ ಬಗ್ಗೆ ಮತ್ತು ಅವರ ವಾದಿಯರ ಆಸ್ತಿಗಳ ಬಗ್ಗೆ ವಾದಿಯನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ:</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

sd

**ಸಿವಿಲ್ ನ್ಯಾಯಾಧೀಶರು, ಜಗಳೂರು**